ಅಧ್ಯಕ್ಷರು : ತತ್‌ತಕ್ಷಣ ಅಲ್ಲ, ಅದಕ್ಕೆ ಕಾಲಾವಕಾಶವಿದೆ, ನಮ್ಮ ರೂಲ್ಸ್‌ನಲ್ಲಿ ಮಾಡಿಕೊಂಡಿದ್ದೇವೆ. ಸರ್ಕಾರ ನಮಗೆ ಯಾವುದು ಒಪ್ಪಿಕೊಳ್ಳುವುದಿದೆ, ಅದನ್ನು ಒಪ್ಪಿಕೊಂಡು ಜಾರಿಗೆ ತರುತ್ತದೆ.

ಶ್ರೀ ಸಿ. ಭೈರೇಗೌಡ : ಅದರ ಮಾಹಿತಿ ಬೇಕಲ್ಲವೇ ತತ್‌ತಕ್ಷಣ ಒಪ್ಪಿಕೊಳ್ಳಬೇಕು ಎನ್ನುವುದು ಇದೆ. ನಮಗೆ ಮಾಹಿತಿ ಬೇಕು, ಈ ಸದನಕ್ಕೆ ಏನು ಒಪ್ಪಿದ್ದಾರೆ ಏನು ಒಪ್ಪಿಲ್ಲ ಎಂಬುದು ಗೊತ್ತಾಗಬೇಕಾಗುತ್ತದೆ.

ಅಧ್ಯಕ್ಷರು : ಅವರಿಗೆ 3 ತಿಂಗಳು ಕಾಲಾವಕಾಶವಿರುತ್ತದೆ ಅದನ್ನು ಅವರು ಹೇಳುತ್ತಾರೆ.

1994-95ನೇ ಸಾಲಿನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ ಮತ್ತು ಉತ್ತರ

* ಶ್ರೀ ಆರ್ ಎನ್.ನಾಯಕ್ (ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆಯ ಮೇಲೆ ನಮ್ಮ ಶಾಸಕ ಮಿತ್ರರಾದಂತಹ ಶ್ರೀ ವಾಟಾಳ್ ನಾಗರಾಜ್‌ರವರು ವರದಿಯನ್ನು ಸಲ್ಲಿಸಿದ್ದಾರೆ. ಅಲ್ಲದೇ ಅವರು ತಮ್ಮ ಭಾಷಣದಲ್ಲೂ ಸಹ ಈ ವಿಷಯದ ಮೇಲೆ ಅಪೂರ್ಣವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ಶ್ರೀ ವಾಟಾಳ್ ನಾಗರಾಜ್‌ರವರು ಕನ್ನಡದ ಅಪ್ರತಿಮ ನಂ. 1 ಹೋರಾಟಗಾರರು. ಅವರು ಬಹಳ ವರ್ಷಗಳಿಂದ ಅವರ ಸಂಪೂರ್ಣ ಶಕ್ತಿಯನ್ನು ಕನ್ನಡದ ಹೋರಾಟಕ್ಕೆ . ಕನ್ನಡ ಬೆಳವಣಿಗೆಗಾಗಿ ವ್ಯಯ ಮಾಡಿದ್ದಾರೆ. ಅವರು ಆಗಾಗ ಮಾತನಾಡುವಾಗ ನಮಗೆ ಅನ್ನಿಸುತ್ತಿತ್ತು. ಇವರು ಹೆಚ್ಚಾಗಿ ಮಾತನಾಡುತ್ತಾರೊ ಏನು ಗೊತ್ತಿಲ್ಲ, ಕನ್ನಡದ ಬಗ್ಗೆ ಹೇಳುತ್ತಾರೆ ಎಂದು ಹಾಗೆ ಅನ್ನಿಸುತ್ತಿತ್ತು. ಆದರೆ ಅವರ ಮುಖಂಡತ್ವದಲ್ಲಿ ಕೊಟ್ಟಿರುವಂತಹ ವರದಿ ಸಂಪೂರ್ಣವಾದಂತಹ ಕನ್ನಡದ ಮೇಲೆ ಇರುವ ಎಲ್ಲಾ ಆಲೋಚನೆಗಳನ್ನು ಇದರಲ್ಲಿ ಭಟ್ಟಿ ಇಳಿಸಿ ಒಂದು ಪುಸ್ತಕ ರೂಪದಲ್ಲಿ ಇವತ್ತು ನಮ್ಮ ಮುಂದಿಟ್ಟಿದ್ದಾರೆ. ಇದು ಅತ್ಯಂತ ಬೆಲೆಯುಳ್ಳ ಪುಸ್ತಕವಾಗಿ ಇತಿಹಾಸದಲ್ಲೇ ದಾಖಲಾಗಲಿದೆ. ಈ ಪುಸ್ತಕದ ವರದಿಯ 1 8 ಮತ್ತು 19ನೆ ಮಟ್ಟದಲ್ಲಿ ಕನ್ನಡದ ಸಮಗ್ರ ಬೆಳವಣಿಗಾಗಿ ಈ ರಾಜ್ಯದಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ಸುಮಾರು 23 ಸಲಹೆಗಳನ್ನು ನೀಡಿದ್ದಾರೆ. ಸಮಯದ ಅಭಾವದಿಂದ ಅವುಗಳನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಈ ವಿಚಾರದಲ್ಲಿ ಒಂದು ಕಡೆ ಹೇಳುವುದಾದರೆ ಅವರ ಇಷ್ಟೆಲ್ಲಾ ಸೂಚನೆಗಳನ್ನು ಪಾಲಿಸುವುದಕ್ಕೆ ಈ ಇಲಾಖೆಗೆ ಹಣಕಾಸಿನ ವ್ಯವಸ್ಥೆಯನ್ನು ಜಾಸ್ತಿ ಮಾಡಬೇಕಾಗುತ್ತದೆ. ಅದು ಒಂದೇ ಬಾರಿಗೆ ಸಾಧ್ಯವಿಲ್ಲವಾದದೂ ಸಹ ಇನ್ನು ಮುಂದಿನ ಅನುಭವದ ಮೇಲೆ ಹಣಕಾಸನ್ನು ಜಾಸ್ತಿಯಾಗಿ ಈ ಇಲಾಖೆಗೆ ಹೊಂದಿಸಿಕೊಂಡರೆ ಈ ಸಮಿತಿ ಕೊಟ್ಟು ವರದಿಯನ್ನು ಸಂಪೂರ್ಣವಾಗಿ ಜಾರಿಯಲ್ಲಿ ತರುವುದಕ್ಕೆ ಇಲ್ಲಿ ಸಾಧ್ಯವಿದೆ ಎಂದು ನಾನು ತಿಳಿಸುತ್ತೇನೆ ಬಹುಶಃ ಇಲ್ಲಿ ನಾನು ಬಹಳಷ್ಟು ವಿಷಯಗಳನ್ನು ಹೇಳುವ ಅವಶ್ಯಕತೆ ಕಾಣುವುದಿಲ್ಲ. ಅವರು ಕೆಲವು

ಪ್ರಶ್ನೆಗಳನ್ನು ಎತ್ತಿದ್ದಾರೆ. ಕನ್ನಡದ ಪುಸ್ತಕದ ಪ್ರಾಧಿಕಾರಕ್ಕೆ, ಕನ್ನಡದ ಸಮಗ್ರ ಸಾಹಿತ್ಯ ಬೆಳವಣಿಗೆಗಾಗಿ ಒಂದು ಕೋಟಿ ರೂಪಾಯಿಯನ್ನು ಮಂಜೂರು ಮಾಡಲಾಗಿದೆ. ಮತ್ತು ಕನ್ನಡದ ಬೆಳವಣಿಗಾಗಿ ತಮಗೆಲ್ಲಾ ಗೊತ್ತಿರುವ ಹಾಗೆ 'ಸಂಸ್ಕೃತ ಸುದಿನ ' ಮತ್ತು ' ಶುಕ್ರವಾರದ ಕಾರ್ಯಕ್ರಮ'ಗಳನ್ನು ಹಮ್ಮಿಕೊಳ್ಳಲಾಗಿದೆ. ಹೊರನಾಡು ಕನ್ನಡಿಗರಿಗೂ ಸಹ ಸಾಕಷ್ಟು ಸಹಾಯವನ್ನು ಮಾಡಲಾಗಿದೆ. ಮತ್ತು ನೀವು ಎಷ್ಟು ಬೆರಳಚ್ಚು ಯಂತ್ರಗಳನ್ನು ಕೊಟ್ಟಿದ್ದೀರಿ ಎಂದು ಕೇಳಿದರು 93-94 ಮತ್ತು 94-95ನೇ ಸಾಲಿಗೆ ಒಟ್ಟು 750 ಕನ್ನಡ ಬೆರಳಚ್ಚು ಯಂತ್ರಗಳನ್ನು ಖರೀದಿಸಿ ಕೊಡಲಾಗಿದೆ. ಕನ್ನಡ ಭವನದ ನಿರ್ಮಾಣಕ್ಕಾಗಿ ಸ್ಥಳವನ್ನು ಗುರುತಿಸಲಾಗಿದೆ. ಆ ಸ್ಥಳ ರವೀಂದ್ರ ಕಲಾಕ್ಷೇತ್ರದ ಪಕ್ಕದಲ್ಲಿ ಇದೆ. ಅದರ ನಿರ್ಮಾಣ ಕಾರ್ಯ ಸದ್ಯದಲ್ಲೇ ಪ್ರಾರಂಭವಾಗುತ್ತದೆ. ಈ ಸಾಲಿನ ಆಯವ್ಯಯದಲ್ಲಿ ಸುಮಾರು 40 ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ತೆಗೆದು ಇಡಲಾಗಿದೆ. ಬೆರಳಚ್ಚುಗಾರರ ಹುದ್ದೆಗಳನ್ನು ಈಗ ಕನ್ನಡ ಬೆರಳಚ್ಚುಗಾರರ ಎಲ್ಲಾ ಹುದ್ದೆಗಳೆಂದು ಪರಿಗಣಿಸಲಾಗಿದೆ. ಮತ್ತು ಇನ್ನುಮುಂದೆ ನೇಮಕಾತಿ ನಿಯಮಗಳ ಪರಿಗಣಿಸಲಾಗಿದೆ. ಮತ್ತು ಇನ್ನು ಮುಂದೆ ನೇಮಕಾತಿ ನಿಯಮಗಳ ಪ್ರಕಾರ ಕನ್ನಡ ಪ್ರೌಢದರ್ಜೆ ಬೆರಳಚ್ಚುಗಾರರನ್ನು ತೆಗೆದುಕೊಳ್ಳಬೇಕಾದರೆ ಪ್ರೌಢದರ್ಜೆ ಪರೀಕ್ಷೆ ಕಡ್ಡಾಯ ... ಆಗಬೇಕು ಎಂದೂ ಸಹ ಮಾಡಲಾಗಿದೆ. ಹೀಗೆ ಸಾಕಷ್ಟು ಕಾರ್ಯಕ್ರಮಗಳನ್ನು ಕನ್ನ ಸಂಸ್ಕೃತಿ ಇಲಾಖೆ ಮಾಡುತ್ತಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಎಷ್ಟೇ ಟೀಕೆ ಟಿಪ್ಪಣಿ ಮಾಡಿದರು ಸಹ ಇಲಾಖೆ ಮತ್ತು ಅಧಿಕಾರಿಗಳ ಮೇಲೆ ಮತ್ತು ನನ್ನ ಮೇಲೆ, ಅವರಿಗೆ ಬಹಳ ಪ್ರೀತಿ ಇದೆ. ಅವರೇ ಹೇಳಿದ್ದಾರೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು. ಇಲ್ಲಿ ಆಗಬೇಕಾದದ್ದು ಬಹಳ ಇದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಶ್ನೆ ಬಂದಾಗ ಪಕ್ಷದ ಪ್ರಶ್ನೆ ಸಹ ಬರುವುದಿಲ್ಲ. ಏಕೆಂದರೆ ಕರ್ನಾಟಕದಲ್ಲಿ ಕನ್ನಡದ ಬೆಳವಣಿಗೆ ಬಗ್ಗೆ ಸದನದಲ್ಲಿ ಒಮ್ಮತ ಇದೆ. ಉದಾಹರಣೆಗೆ ಪ್ರಾಧಿಕಾರದ ವಿಧೇಯಕವನ್ನು ತಂದಾಗಲೇ ಅದು ಗೊತ್ತಾಗಿದೆ. ಒಟ್ಟಾರೆ ಸಂಪೂರ್ಣ ಸಹಮತದಿಂದ ಅದು ಇಲ್ಲಿಂದ ಪಾಸ್ ಆಗಿ ಹೋಗಿದೆ ಹೀಗೆ ಬಹಳ ಒಳ್ಳೆಯ ಕೆಲಸ ಮಾಡುತ್ತಿರುವಂತಹ ಈ ವಾರ್ತಾ ಇಲಾಖೆಯ ಬಗ್ಗೆ ಒಂದು ಮಾತನ್ನು ಅವರು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲೂ ಬಂದಿದೆ. ಈ ವಾರ್ತಾ ಇಲಾಖೆಯಲ್ಲಿ ಒಬ್ಬ ಜಿಲ್ಲಾಮಟ್ಟದ ಅಧಿಕಾರಿಯು ಅಲ್ಲಿ ಸಿಪಾಯಿ ಕೆಲಸವನ್ನು ಸಹ ಮಾಡಬೇಕಾಗುತ್ತದೆ. ಅದರ ಅರ್ಥ ಅಲ್ಲಿಗೆ ಬಹಳಷ್ಟು ಸಿಬ್ಬಂದಿಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಅದೂ ಸಹ ಇನ್ನು ಮುಂದಿನ ದಿನಗಳಲ್ಲಿ ಈ ನೌಕರರನ್ನು ಆರಿಸಿಕೊಳ್ಳುವುದರ ಕಡೆ ನಾವು ಗಮನ ಹರಿಸಬೇಕಾಗಿದೆ. ನಾನು ಇಷ್ಟು ಹೇಳುತ್ತಾ ಈ ವಿಷಯ ಸಮಿತಿಯ ವರದಿಯಲ್ಲಿ ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ ಅದನ್ನೆಲ್ಲಾ ಲಕ್ಷ್ಯದಲ್ಲಿ ಇಟ್ಟುಕೊಂಡು ಈ ಕೆಲಸವನ್ನು ಮಾಡೋಣವೆಂದು ಹೇಳುತ್ತಾ ಈ ಬೇಡಿಕೆಗೆ ಒಪ್ಪಿಗೆಯನ್ನು ಸೂಚಿಸಬೇಕು.

ಶ್ರೀ ಹೆಚ್. ಏಕಾಂತಯ್ಯ : ಈ ಶುಕ್ರವಾರ ಕಾರ್ಯಕ್ರಮ ಅಂದರೆ ಏನು?

ಶ್ರೀ ಆರ್.ಎನ್ ನಾಯಕ್ : ತಾಲ್ಲೂಕು ಮಟ್ಟದಲ್ಲಿ ಶುಕ್ರವಾರದ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಏನಾಯಿತು ಅಂತ ಅಂದರೆ ಅಧ್ಯಕ್ಷರೆ, ತಾವು ವಿಷಯ ಸಮಿತಿಯನ್ನು ರಚಿಸಿ ಕೊಟ್ಟ ವರದಿಗೆ ನಾಲ್ಕೆ ಮಾತಿನಲ್ಲಿ ವರದಿ ಚೆನ್ನಾಗಿ ಕೊಟ್ಟಿದ್ದಾರೆ ಎಂದು ಮಾನ್ಯಮಂತ್ರಿಗಳು ಹೇಳಿದರು. ಈ ವರದಿಯನ್ನು ಯಾವಾಗ ಇವರು ಕಾರ್ಯಗತ ಮಾಡುತ್ತಾರೆ ಮತ್ತು ಅದಕ್ಕೆ ಎಷ್ಟು ಹಣವನ್ನು ಇಟ್ಟುಕೊಂಡಿದ್ದಾರೆ ಅದನ್ನು ಸ್ವಲ್ಪ ಹೇಳಿದರೆ ನಮಗೆ ಸಂತೋಷ. ನಾವು ಕೊಟ್ಟಿರತಕ್ಕ ವರದಿಯಲ್ಲಿ ಎಷ್ಟು ಕಾರ್ಯಕ್ರಮ ಮಾಡಬಹುದು. ಸುಮ್ಮಸುಮ್ಮನೆ ಈ ವಿಷಯ ಸಮಿತಿಗಳು ಏಕೆ ಬೇಕು; ಇದು ನಾಳೆ ಮುಗಿದರೆ ಈ ವರದಿಗಳು ಎಲ್ಲಿ ಹೋಗಬಹುದು ಯಾವುದಾದರೂ ಒಂದು ಹಳೆಯ ಪೇಪರ್ ಬಂಡಲಿಗೋ ಅಥವಾ ಬುಟ್ಟಿಗೆ ಹೋಗಬಹುದು ಎಂದು ನನಗೆ ಅನ್ನಿಸುತ್ತದೆ. ಒಂದು ಪ್ರಾಮಾಣಿಕವಾದ ವರದಿಯನ್ನು ನಾವು ಹಗಲು ರಾತ್ರಿ ಕುಳಿತು ಚರ್ಚೆ ಮಾಡಿ ತಾವು ಒಪ್ಪಿಕೊಂಡ ಹಾಗೆ ವರದಿಯನ್ನು ಕೊಟ್ಟಿದ್ದೇವೆ ನೀವು ಎಷ್ಟು ಅದರಲ್ಲಿ ಈ ವರ್ಷ ಮಾಡುವುದಕ್ಕೆ ಸಾಧ್ಯ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಆರ್.ಎನ್.ನಾಯಕ್ : ನಿಮ್ಮ ವರದಿ ಅದು ಎಷ್ಟು ಉತ್ತಮ ವರದಿ ಎಂದು ಹೇಳಿದರೆ, ಅದು ಒಂದು ದಿವಸಕ್ಕೆ ಎರಡು ದಿವಸಕ್ಕೆ ಅದನ್ನು ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ. ಈಗ ಪುರಾಣ ಪುಸ್ತಕಗಳನ್ನು, ಭಗವದ್ಗೀತೆಯನ್ನು ಒಂದೆರಡು ದಿವಸಕ್ಕೆ ಓದಿ ಮುಗಿಸುವುದಕ್ಕೆ ಸಾಧ್ಯವೇ? ನಿಮ್ಮ ವರದಿ ಅಷ್ಟು ಶ್ರೇಷ್ಟವಾದುದು. ಕನ್ನಡದ ಭಗವದ್ಗೀತೆ. ಅದು ಬಹಳ ಕಾಲ ತೆಗೆದುಕೊಳ್ಳುತ್ತದೆ. ಅದು ಯಾವಾಗಲೂ ನಿತ್ಯನೂತನ.

ಶ್ರೀ ವಾಟಾಳ್ ನಾಗರಾಜ್ : ಓಹೋ, ಹಾಗಾದರೆ ಇದು ಮಹಾಭಾರತ, ರಾಮಾಯಣ ಎಂದು ಹೇಳಿ. ಹಾಗಾದರೆ ಸ್ವಾಮಿಗಳನ್ನು ಕರೆಯಿಸಿ, ಒಂದೊಂದು ಪಾರ್ಕಿನಲ್ಲಿ ಕೂರಿಸಿ ಪ್ರವಚನ ಮಾಡಿಸೋಣ.

ಶ್ರೀ ಕಾಗೋಡು ತಿಮ್ಮಪ್ಪ : ಸ್ವಾಮಿ, ಇದು ಒಂದು ಗ್ರಂಥದ ರೂಪದಲ್ಲಿ ಇದೆ. ಇದನ್ನು ತೂಕ ಮಾಡಿ, ಕಾರ್ಯರೂಪಕ್ಕೆ ತರಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಕಾಗೋಡು ತಿಮ್ಮಪ್ಪನವರು ಈಗ ನಿಜ ಹೇಳಿದರು. ವರದಿಯನ್ನು ತೂಕಕ್ಕೆ ಹಾಕುತ್ತೇವೆಂದು ಹೇಳಿದ್ದೀರಿ, ಹಾಕಿ. ಇದು ಸರಕಾರ ಮಾಡುವ ಕೆಲಸ, ಮಾಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂಥ ಅಂಶವನ್ನು ನಾನು ಪೂರಾ ಒಪ್ಪುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಇಂತಹ ಪ್ರಮುಖವಾದಂಥ ವಿಚಾರದಲ್ಲಿ ಹಾಜರಿ ಇರಬೇಕಾದುದು ಅವರ ಜವಾಬ್ದಾರಿ ಇದೆ. ಆದರೆ ಅನಿವಾರ್ಯ ಸಂದರ್ಭದಿಂದ ಕೆಲವರು ಬರುವುದಕ್ಕೆ ಆಗುತ್ತಿಲ್ಲ. ಈಗ ಉದಾಹರಣೆಗೆ

ಬಿ.ಎಸ್.ಪಾಟೀಲರು, ಅವರ ಬಂದು ರಸ್ತೆ ಅಪಘಾತದಲ್ಲಿ ತೀರಿಹೋಗಿ ಆ ಸ್ಥಳಕ್ಕೆ ಹೋಗಿದ್ದಾರೆ ಅಂತಹ ಸಂದರ್ಭಗಳು ಇರುತ್ತವೆ.

ಶ್ರೀ. ಡಿ.ಬಿ.ಚಂದ್ರೇಗೌಡ : ಆ ಸಂದರ್ಭಕ್ಕೆ ಪರಿಹಾರ ಇದೆ. ಅವರು ಅಧ್ಯಕ್ಷರಿಗೆ ಪತ್ರ ಬರೆದು ತಮ್ಮ ಅನುಮತಿ ತೆಗೆದುಕೊಳ್ಳಬಹುದು. ಅದಕ್ಕೆ ನಮ್ಮ ಅಭ್ಯಂತರ ಇಲ್ಲ.

ಬೇಡಿಕೆ ಸಂಖ್ಯೆ 23 ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಬಿ.ಎಸ್. ಪಾಟೀಲ್(ಸಾಸನೂರ್)ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಪರವಾಗಿ : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

4.00 ಪಿಎಂ

ಅಭಿಯಾಚನೆ ಕ್ರಮಾಂಕ :11: ಲೇಖನ ಸಾಮಗ್ರಿಗಳು ಮತ್ತು ಮುದ್ರಣ

ಶ್ರೀ ಕೆ. ಶಿವಮೂರ್ತಿ (ವಯಸ್ಕರ ಶಿಕ್ಷಣ ಖಾತೆ ಸಚಿವರು) : ಮಾನ್ಯಅಧ್ಯಕ್ಷರೆ,ಮಾನ್ಯ ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 21,71,52,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ)ಮಂಜೂರು ಮಾಡಬೇಕೆಂದು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ :12: ಸಾರ್ವಜನಿಕ ವಾಚನಾಲಯ ಇತ್ಯಾದಿ :

ಮಾನ್ಯ ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕವರ್ಷದಲ್ಲಿ "ಸಾರ್ವಜನಿಕ ವಾಚನಾಲಯ ಇತ್ಯಾದಿ " ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 3616,31,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ :13: ಉನ್ನತ ಶಿಕ್ಷಣ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ , ಕಾನೂನು, ಸಂಸದೀಯ ವ್ಯವಹಾರಗಳುಮತ್ತು ಧಾರ್ಮಿಕ ಮಂತ್ರಿಗಳು) (ಉನ್ನತ ಶಿಕ್ಷಣ ಖಾತೆ ಮಂತ್ರಿಗಳು ಪರವಾಗಿ) : ಮಾನ್ಯ ಅಧ್ಯಕ್ಷರೆ,

ಮಾನ್ಯ ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-95-ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿಉನ್ನತ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 242,62,92,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ :37: ರಾಜ್ಯ ವಿಧಾನ ಮಂಡಲ

ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ರಾಜ್ಯ ವಿಧಾನ ಮಂಡಲಿ '' ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,39,32,000 ರೂ. ಗಳಿಗಿಂತ ಮೀರದ ಮೊತ್ತವನ್ನು(ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ :38: ನ್ಯಾಯ ಪರೀಪಾಲನೆ

ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 61,35,80,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ತಮ್ಮಲ್ಲಿ ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ :53: ಮತೀಯ ಮತ್ತು ಧರ್ಮರಾಯ ಸಂಸ್ಥೆಗಳು ಇತ್ಯಾದಿ.

ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಮತೀಯ ಮತ್ತು ಧರ್ಮರಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21 ,65,25,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಕೋರುತ್ತೇವೆ.

ಅಧ್ಯಕ್ಷರು : ಎಲ್ಲಾ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯಅಧ್ಯಕ್ಷರೇ, ಮೊದಲು ಮಾನ್ಯ ಕಂದಾಯ ಮಂತ್ರಿಗಳು ಉತ್ತರವನ್ನು ಕೊಡಲಿ. ಏಕೆಂದರೆ, ಬಹಳ ಪ್ರಮುಖವಾದ ವಿಚಾರಗಳನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಕಂದಾಯ ಮಂತ್ರಿಗಳು ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಧರ್ಮಸಿಂಗ್ : ನಾನು ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಪ್ರಮುಖ ವಿಚಾರಗಳಿವೆ. ಅದರ ಬಗ್ಗೆ ನಾವು ಕೇಳಬೇಕಾಗುತ್ತದೆ. ನಾವು ಕೇಳಿರುವುದಕ್ಕೆ ಅವರಿಂದ ಸ್ವಲ್ಪವಾದರೂ ಉತ್ತರ ಬರದಿದ್ದರೆ ಅದು ಶೋಭೆಯನ್ನು ತರುವುದಿಲ್ಲ. ಆದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ಕಂದಾಯ ಮಂತ್ರಿಗಳು ಉತ್ತರವನ್ನು ಕೊಡಲಿ. ಏಕೆಂದರೆ ಮಳೆಯ ಅಭಾವವಾಗಿದೆ, ಬರಗಾಲ ಬಂದಿದೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ನೆರೆಹಾವಳಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬರಗಾಲದ ಬಗ್ಗೆ ಕೂಡ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅವರು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ನಾನೂ ಕೂಡ ಮಧ್ಯೆ ಪ್ರವೇಶ ಮಾಡಿ ಕೆಲವು ಉತ್ತರಗಳನ್ನೂ ಕೊಟ್ಟಿದ್ದೇನೆ. ಅಲ್ಲದೆ ಕಂದಾಯ ಇಲಾಖೆಯ ಬಗ್ಗೆ ಸಾಕಷ್ಟು ಪ್ರಶ್ನೆಗಳನ್ನು ಅವರು ಸದನದಲ್ಲಿ ಏನು ಹಾಕಿದ್ದರು ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಈಗ ಬೇಡಿಕೆಗಳ ಬಗ್ಗೆ ಕೂಡ ಉತ್ತರವನ್ನು ಕೊಡಬೇಕೆಂದರೆ ಅದಕ್ಕೂ ನಾನು ಸಿದ್ಧವಾಗಿದ್ದೇನೆ. ವಿಶೇಷ ಸಮಿತಿ ಏನೇನು ಶಿಫಾರಸು ಮಾಡಿದೆ ಅದರ ಬಗ್ಗೆ ಕೂಡ ಕಂದಾಯ ಇಲಾಖೆ ಕ್ರಮವನ್ನು ತೆಗೆದುಕೊಳ್ಳುತ್ತದೆ. ಎಲ್ಲ ಇಲಾಖೆಗಳಿಗಿಂತಲೂ ಕಂದಾಯ ಇಲಾಖೆ ಬಹಳ ಪ್ರಮುಖವಾದುದು, ಮತ್ತು ಜನರಿಗೆ ಸಂಬಂಧಪಟ್ಟಿದ್ದು ಆಗಿರುವುದರಿಂದ ನಾವು ಅದನ್ನು ಸಮಗ್ರವಾಗಿ ಆಲೋಚನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ವಿಶೇಷವಾಗಿ ಬರಗಾಲ ಮತ್ತು ನೆರೆ ಹಾವಳಿಯ ಬಗ್ಗೆ ಚರ್ಚೆ ನಡೆದುದು ತಮಗೆ ಗೊತ್ತಿದೆ. ಎಲ್ಲಿ ಪ್ರವಾಹ ಬಂತೋ ಆ ಭಾಗಕ್ಕೆ ಸಂಬಂಧಪಟ್ಟ ಶಾಸಕರು ಅದರ ಬಗ್ಗೆ ತೀವ್ರವಾಗಿ ಮಾತನಾಡಿದ್ದಾರೆ. ಆದರೆ ಎಲ್ಲಿ ಬರಗಾಲ ಬಂದಿದೆ ಆ ಪ್ರದೇಶದ ಶಾಸಕರು ಅದರ ಬಗ್ಗೆ ಮಾತನಾಡುವುದಕ್ಕೆ ಅವತ್ತು ಅವಕಾಶ ಸಿಕ್ಕಲಿಲ್ಲ. ನಾವು ಇಲ್ಲದೇ ಇರತಕ್ಕ ಸಂದರ್ಭದಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಉತ್ತರವನ್ನೂ ಕೂಡ ಕೊಟ್ಟಿದ್ದಾರೆ. ಆದ್ದರಿಂದ ಈಗ ಎಲೆಲ್ಲಿ ಬರಗಾಲ ಬಂದು ತೀವ್ರವಾದ ಸಮಸ್ಯೆಗಳುಂಟಾಗಿವೆ ಅದರ ಬಗ್ಗೆ ಮಾತನಾಡಲು ಅವಕಾಶವನ್ನು ತಾವು ಕೊಡಬೇಕಾಗಿದೆ.

ಶ್ರೀ ಧರ್ಮಸಿಂಗ್ : ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ಒಂದು ನಿಲುವಳಿ ಸೂಚನೆ ಮೂಲಕ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ಅದಕ್ಕೆ ಹೇಳಿಕೆಯನ್ನು ಕೊಟ್ಟಮೇಲೆ ವಿರೋಧಪಕ್ಷದವರು ವಾಕೌಟ್ ಮಾಡಿದ ಮೇಲೆ ಕೂಡ ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ನಾನು ಕೆಲವು ವಿಚಾರಗಳನ್ನು ಇಟ್ಟಿದ್ದೇನೆ. ತದನಂತರ ಮಾನ್ಯ ಮುಖ್ಯಮಂತ್ರಿಗಳಿದ್ದಾಗಲೂ ನಾನು ಸ್ಪಷ್ಟೀಕರಣವನ್ನು ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ತಾಲ್ಲೂಕಿನಲ್ಲಿ ಭೀಕರ ಬರಗಾಲ ಬಂದಿದೆ. ಅದರ ಬಗ್ಗೆ ನೀವು ಹೇಳಲೇ ಇಲ್ಲ. ನಾವು ಯಾರನ್ನೂ ಕೇಳಬೇಕು. ನಮ್ಮ ಚಾಮರಾಜ

ನಗರ ತಾಲ್ಲೂಕಿನಲ್ಲಿ ಭೀಕರ ಬರಗಾಲ ಬಂದಿದೆ. ನೀವು ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದು ಅವರಿಂದ ವರದಿಯನ್ನೇನಾದರೂ ತರಿಸಿಕೊಂಡಿದ್ದೀರಾ? ಏನು ಕ್ರಮವನ್ನು ನೀವು ಕೈಗೊಂಡಿದ್ದೀರಿ?

ಶ್ರೀ ಧರ್ಮಸಿಂಗ್ : ಮತ್ತೊಮ್ಮೆ ತಮಗೆ ಹೇಳಬೇಕೆಂದರೆ ರಾಜ್ಯದ 16 ಜಿಲ್ಲೆಗಳಲ್ಲಿ 94 ತಾಲೂಕುಗಳಲ್ಲಿ ನೆರೆ ಹಾವಳಿ ಬಂದಿದೆ. 10-12 ಜಿಲ್ಲೆಗಳಲ್ಲಿ 113 ತಾಲ್ಲೂಕುಗಳಲ್ಲಿ ಈ ರೀತಿ ಬರಗಾಲ ಪರಿಸ್ಥಿತಿ ಬಂದಿದೆ. ಈ ದಿಸೆಯಲ್ಲಿ ಬರಗಾಲ ಪರಿಹಾರಕ್ಕಾಗಿ 230 ಕೋಟಿ ರೂ. ನೆರೆಹಾವಳಿಯಿಂದ 161 ಕೋಟಿ ರೂಪಾಯಿ ನಷ್ಟ ಹಾನಿಯಾಗಿದೆ ಎಂದು ಒಂದು ಅಂದಾಜು ಮಾಡಿದ್ದೇವೆ. ಇನ್ನು ಕುಡಿಯುವ ನೀರಿನ ಪೂರೈಕೆಗೆ ಪ್ರತಿಯೊಂದು ಜಿಲ್ಲೆಗೆ 7.40 ಕೋಟಿ ರೂ.ಗಳನ್ನು ಆದ್ಯತೆ ಮೇರೆಗೆ ಬಿಡುಗಡೆ ಮಾಡಿ, ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಜಿ.ಆರ್.ವೈ.ಬಾಬ್ತು ನಿಮ್ಮಲ್ಲಿರುವ ಹಣವನ್ನು ಖರ್ಚು ಮಾಡಬೇಕೆಂದು ನಿರ್ದಿಷ್ಟ ಆದೇಶವನ್ನು ಕೊಟ್ಟಿದ್ದೇವೆ. ಕೆಲಸ ಕಾರ್ಯಗಳು ನಡೆಯುತ್ತಿವೆ. ನಿಮ್ಮಲ್ಲಿ ಇನ್ನೂ ಕೂಡ ಮಳೆ ಬರುತ್ತಿಲ್ಲವೆಂಬ ಅಂಶ ಸರ್ಕಾರದ ಗಮನದಲ್ಲಿದೆ. ನೆರೆಹಾವಳಿ ಮತ್ತು ಬರಗಾಲ ಪರಿಸ್ಥಿತಿಯನ್ನೆದುರಿಸಲು ಸರ್ಕಾರ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡು ಕೆಲಸ ಮಾಡುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ತಾಲ್ಲೂಕಿನಲ್ಲಿ ಇನ್ನೂ ಮಳೆ ಇಲ್ಲ.

ಶ್ರೀ ಧರ್ಮಸಿಂಗ್ : ಮಳೆ ಇಲ್ಲದಿದ್ದರೂ ಮೈಸೂರು ಜಿಲ್ಲೆಯಲ್ಲಿ ಮತ್ತಿತರ ಕೆರೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಎನ್.ಆರ್.ಇ.ಪಿ. ಅಡಿಯಲ್ಲಿ ಪೈಪ್ ವಾಟರ್ ಸಪ್ಲೈ ಸ್ಕೀಂನ್ನು ತೆಗೆದುಕೊಳ್ಳುತ್ತಿದ್ದೇನೆ. ಕೊಳವೆ ಬಾವಿಗಳಿಗೋಸ್ಕರ ನಾವು 7.40 ಕೋಟಿ ರೂಪಾಯಿಗಳನ್ನು ಸ್ಪೇರ್ಸಿಟಿ ಕಾರ್ಯಕ್ರಮದಡಿಯಲ್ಲಿ ಬಿಡುಗಡೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನೀವು ಕೊಟ್ಟಿರತಕ್ಕದ್ದು ಸಾಕಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಿ ಎಂದು ನಾನು ಹೇಳುತ್ತಿರುವುದು.

ಶ್ರೀ ಧರ್ಮಸಿಂಗ್ : ಈಗ ಬಹಳಷ್ಟು ಜನರಿಗೆ ಕೆಲಸವನ್ನು ಕೊಡಬೇಕಾಗಿದೆ, ನೀರಿನ ತೊಂದರೆ ಇದೆ. ನಾವು ಎಲ್ಲಾ ಜಿಲ್ಲೆಗಳಿಂದ ವರದಿಗಳನ್ನು ತರಿಸಿಕೊಂಡು ಅಲ್ಲಿಯ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಅವಶ್ಯಕವಿರುವಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ನಾನು ಹೇಳುತ್ತಿರುವುದು ಜಿಲ್ಲಾಧಿಕಾರಿಗಳ ವರದಿಯ ಆಧಾರದ ಮೇಲೆ. ಇನ್ನೂ ಮಾಡಬೇಕಾದದ್ದು ಇರುವುದರಿಂದ ಅದನ್ನು ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇವೆ. ಈ ವಿಚಾರ ಇಡೀ ರಾಜ್ಯಕ್ಕೆ ಅದರಲ್ಲೂ ನಮ್ಮ ಇಲಾಖೆಗೆ ನೇರವಾಗಿ ಸಂಬಂಧಪಟ್ಟಿದ್ದುದು. ತಾವೂ ಕೂಡ ನೋಡಿದ್ದೀರಿ. ನಾನೂ ಕೂಡ ಇತ್ತೀಚೆಗೆ ಡಿವಿಜನಲ್ ಕಮಿಷನರ್‌ರವರ ಮೀಟಿಂಗ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ತಾವು ಮೈಸೂರಿನ ಮೀಟಿಂಗ್‌ಗೆ ಬಂದು ಹಾಗೆಯೇ ಹೊರಟು ಹೋದಿರಿ. ಅಲ್ಲೂ ಕೂಡ ಇದರ ಬಗ್ಗೆ

ಸಂಪೂರ್ಣ ಚರ್ಚೆಯಾಗಿದೆ. ತಾವು ಕಳುಹಿಸಿರುವಂಥ ಎಲ್ಲಾ ಪತ್ರಗಳ ಮೇಲೂ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನೀವೇನೋ ವಿಭಾಗೀಯ ಮಟ್ಟದಲ್ಲಿ ಚರ್ಚೆ ಮಾಡಿಕೊಂಡು ಬಂದಿರಿ. ಆದರೆ ಅದಕ್ಕೆಲ್ಲಾ ಈಗ ಎಷ್ಟು ಹಣ ಬೇಕಾಗುತ್ತದೆ? ತಾವೂ ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಹೋಗಿ ಏನು ಚರ್ಚೆ ಮಾಡಿಕೊಂಡು ಬಂದಿದ್ದೀರಿ. ಅದಕ್ಕೆಲ್ಲಾ ಎಷ್ಟು ಹಣ ಖರ್ಚಾಗುತ್ತದೆ? ನೀವು ಕೊಟ್ಟಿರತಕ್ಕ ಭರವಸೆಗಳೇನು? ಅದನ್ನೆಲ್ಲಾ ಯಾವಾಗ ಈಡೇರಿಸುತ್ತೀರಿ? ಎಂಬುದನ್ನು ತಾವು ಹೇಳಬೇಕು. ನಾನು ಮೊದಲಿನಿಂದಲೂ ಒತ್ತಾಯ ಮಾಡಿ ತಮಗೆ ಹೇಳುತ್ತಿದ್ದೇನೆ, ನಮ್ಮ ತಾಲ್ಲೂಕು ಗಡಿ ಪ್ರದೇಶವಾಗಿರುವುದರಿಂದ ಅಲ್ಲಿ ಬಹಳ ಕಠಿಣವಾದ ಪರಿಸ್ಥಿತಿ ಉಂಟಾಗಿದೆ. ಇದನ್ನು ಪರಿಹರಿಸಲು ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಹೇಳಬೇಕು. ಈ ಸಂದರ್ಭ ಬಿಟ್ಟರೆ ಇನ್ನು ಯಾವಾಗ ನಿಮ್ಮನ್ನು ನಾವು ಕೇಳಬೇಕು?

ಶ್ರೀ ಸಿ. ಬಿ. ಚಂದ್ರೇಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿಯ ಸದಸ್ಯರು. ನಮಗೆ ಮಳೆ ಬಂದು ತೊಂದರೆಯಾಗಿದೆ ಎಂದು ಅವರು ಹೇಳಬೇಕು. ಆದರೆ ಭೀಕರ ಬರಗಾಲ ಎಂದು ಹೇಳುತ್ತಿದ್ದಾರೆ.

ಶ್ರೀ ಸಿ. ಭೈರೇಗೌಡ : ನಮ್ಮ ಜಿಲ್ಲೆಗೆ ಕುಡಿಯುವ ನೀರಿನ ವ್ಯವಸ್ಥೆಗೋಸ್ಕರ 35 ಲಕ್ಷ ರೂ. ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಾನು ಇನ್ನೂ ಮಾತನಾಡಿಲ್ಲ.

ಅಧ್ಯಕ್ಷರು : ನೀವು ಮಾತನಾಡುವುದಕ್ಕೆ ಅವಕಾಶವೇ ಇಲ್ಲ. ಚರ್ಚೆ ಮುಗಿದುಹೋಗಿದೆ.

ಶ್ರೀ ಸಿ. ಭೈರೇಗೌಡ : ನಮ್ಮ ಜಿಲ್ಲೆಗೆ 35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಿಂದ ಏನೇನೂ ಮಾಡುವುದಕ್ಕೆ ಆಗುತ್ತಿಲ್ಲ. ನಮ್ಮಲ್ಲಿ ಸುಮಾರು 200 ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಆದ್ದರಿಂದ ಕನಿಷ್ಟ 1 ಕೋಟಿ ರೂ. ಆದರೂ ಬಿಡುಗಡೆ ಮಾಡಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ಧರ್ಮಸಿಂಗ್ : ಕೋಲಾರ ಜಿಲ್ಲೆಗೆ ಕಳೆದ ವರ್ಷ ಖರ್ಚು ಮಾಡಿದ್ದುದು 139 ಲಕ್ಷ ರೂ. ಎಂದು ಹೇಳಿದ್ದೇವೆ. ಈಗ ಜಿಲ್ಲಾಧಿಕಾರಿಗಳ ಹತ್ತಿರ 1.67 ಕೋಟಿ ರೂಪಾಯಿ ಇದೆ. ನಿಮ್ಮಲ್ಲಿ ಇನ್ನೂ ಕುಡಿಯುವ ನೀರಿಗೆ ತೊಂದರೆ ಇದೆ ಎಂದು ನೀವು ಹೇಳಿದ ಮೇಲೆ ಒಟ್ಟು 75 ಲಕ್ಷ ರೂ. ಗಳನ್ನು ಕೋಲಾರ ಜಿಲ್ಲೆಗೆ ಕೊಟ್ಟಿದ್ದೇವೆ. ಇನ್ನೂ ಹೆಚ್ಚಿಗೆ ಬೇಕೆಂದರೆ ನಾವು ಕೊಡುತ್ತೇವೆ. ಮಾನ್ಯ ಅಧ್ಯಕ್ಷರ ಮೂಲಕ ಹೇಳುವುದೇನೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಭೀಕರ ಬರಗಾಲವಿದೆ, ಎಲ್ಲೆಲ್ಲಿ ಕುಡಿಯುವ ನೀರಿನ ತೊಂದರೆ ಇದೆ, ಎಲ್ಲೆಲ್ಲಿ ನೆರೆಹಾವಳಿ ಇದೆ, ಆ ಎಲ್ಲಾ ಪ್ರದೇಶಗಳಲ್ಲೂ ನಾವು ಸಮಗ್ರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಹೇಳಿದ್ದೇವೆ. ಎಲ್ಲಾ ಅನುಕೂಲಗಳನ್ನೂ ಮಾಡಿಕೊಡಬೇಕದದ್ದು ಸರ್ಕಾರದ ಕರ್ತವ್ಯವಾಗಿರುವುದರಿಂದ ನಾವು ಆದೇಶವನ್ನು ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಜಿಲ್ಲಾಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಿಲ್ಲ. ನಮಗೆ ಅವರಿಂದ ಯಾವುದೇ ಅನುಕೂಲವೂ ಆಗುತ್ತಿಲ್ಲ. ನಿಮಗೆ ಇದನ್ನು ನಾವು ಎಷ್ಟು ಸಾರಿ ಹೇಳಬೇಕು? ಹೇಳಿ ಹೇಳಿ ಸಾಕಾಗಿದೆ.

ಶ್ರೀ ಧರ್ಮಸಿಂಗ್ : ನಿಮ್ಮ ಚಾಮರಾಜ ನಗರಕ್ಕೆ ವಿಶೇಷವಾಗಿ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಿ ಜಿಲ್ಲಾಧಿಕಾರಿಗಳು ಕೆಲಸ ಮಾಡಿಲ್ಲವೆಂದು ಹೇಳುತ್ತಿದ್ದೀರಿ ಅಲ್ಲಿ ಜಿಲ್ಲಾಧಿಕಾರಿಯವರನ್ನು ಸಂಪರ್ಕಿಸಿ ತಕ್ಷಣ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವಂತ ನಿರ್ಧಿಷ್ಟು ಆದೇಶವನ್ನು ಕೊಡುತ್ತೇವೆ. ನಮಗೆ ವರದಿ ಬಂದಿದೆ. ಅದರ ಮೇಲೂ ಯಾವುದೇ ಕೆಲಸವೂ ಆಗಿಲ್ಲವೆಂದು ಹೇಳುವುದಾದರೆ ನಾನು ಮತ್ತೊಮ್ಮೆ ಹೇಳುತ್ತೇನೆ. ನಾನು ವರದಿಯನ್ನು ತರಿಸಿಕೊಂಡು ಅದರ ಆಧಾರದ ಮೇಲೆ ಹೇಳುತ್ತಿದ್ದೇನೆ. ನಿಮ್ಮ ಚಾಮರಾಜನಗರಕ್ಕೆ ಯಾರೂ ಬರದಿದ್ದರೂ ನಾನು ಬಂದು ನೋಡಿಕೊಂಡು ಬಂದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಈ ಸದನದ ಪರವಾಗಿ, ನಮ್ಮ ಕ್ಷೇತ್ರದ ಜನತೆಯ ಪರವಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಅಭಿಯಾಚನೆ ಕ್ರಮಾಂಕ : 42 : ಜಿಲ್ಲಾಡಳಿತ, ಅಭಿಯಾಚನೆ ಕ್ರಮಾಂಕ : 51 : ಭೂ ಕಂದಾಯ ಇತ್ಯಾದಿ. ಅಧಿಯಾಚನೆ ಕ್ರಮಾಂಕ : 52 : ಮುದ್ರಾಂಕಗಳು ಮತ್ತು ನೋಂದಣಿ.

ಶ್ರೀ ಧರ್ಮಸಿಂಗ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ 42, 51 ಮತ್ತು 52 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮಿಾರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 24 : ಅರಣ್ಯ.

ಶ್ರೀ ಎಚ್. ವಿಶ್ವನಾಥ್ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 24ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 62 : ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ.

ಶ್ರೀ ಎಚ್. ಆರ್. ರಾಜು (ವಿಜ್ಞಾನ ಯಂತ್ರಕಲೆ ಮತ್ತು ಪರಿಸರ ರಾಜ್ಯ ಸಚಿವರು) : ಮಾನ್ಯ. ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 62ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 31 : ವೈದ್ಯಕೀಯ ಶಿಕ್ಷಣ.

ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) - ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 31ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 2 : ತೋಟಗಾರಿಕೆ

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ : 2 ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿಸಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 4 : ಮೀನುಗಾರಿಕೆ.

ಶ್ರೀ ವಸಂತ ವಿ.ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 4ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿಸಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 5 : ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 5ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 21 : ಸಣ್ಣ ಉಳಿತಾಯ ಮತ್ತು ರಾಜ್ಯಲಾಟರಿ ವಿಮೆ ಮತ್ತು ರಾಜ್ಯ ಲೆಕ್ಕದ ಪತ್ರ. ಅಭಿಯಾಚನೆ ಕ್ರಮಾಂಕ : 45 : ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ.

ಶ್ರೀ ಮದನಗೋಪಾಲ ನಾಯಕ್ (ಸಣ್ಣ ಉಳಿತಾಯ ಮತ್ತು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ 21 ಮತ್ತು 45ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 25 : ರಾಜ್ಯದ ಅಬಕಾರಿ.

ಶ್ರೀ ರಮಾನಾಥ ರೈ (ಅಬ್ಕಾರಿ ರಾಜ್ಯ ಸಚಿವರು) : ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 25ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಎಲ್ಲಾ ಬೇಡಿಕೆಗಳನ್ನು ಮಂಡಿಸಲಾಯಿತು.

ಶ್ರೀ ಸಿ. ಭೈರೇಗೌಡ : ನಾನು ಸಮಿತಿಯಲ್ಲಿ ಕೆಲಸ ಮಾಡಿದ್ದೇನೆ. ಲಾಟರಿಯನ್ನು ಸಂಪೂರ್ಣವಾಗಿ ಕೈಬಿಡಬೇಕು. ಸಂಪೂರ್ಣವಾಗಿ ಪಾನನಿರೋಧ ಜಾರಿಗೆ ತರಬೇಕು ಎಂಬ ಎರಡು ಮುಖ್ಯವಾದ ಶಿಫಾರಸ್ಸುಗಳನ್ನು ವರದಿಯಲ್ಲಿ ಮಾಡಿದ್ದೆವು, ಅದು ಏನಾಯಿತು ಎಂದು ದಯವಿಟ್ಟು ಹೇಳಬೇಕು.

ಅಧ್ಯಕ್ಷರು : ತಮ್ಮ ಶಿಫಾರಸ್ಸನ್ನು ಸರ್ಕಾರ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದೆಯೆಂದು ಅವರು ಹೇಳುತ್ತಾರೆ.

ಶ್ರೀ ಸಿ. ಭೈರೇಗೌಡ : ನಾನು ಇನ್ನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಅದರ ಮೇಲೆ ಮಾತನಾಡಿದ್ದೇನೆ. ಈ ವರ್ಷ 100 ಕೋಟಿ ರೂಪಾಯಿ ಆದಾಯ ಎಕ್ಸೈಜ್ ಬಾಬಿನಲ್ಲಿ ಕಡಿಮೆ ಬರುತ್ತದೆನ್ನುವ ಮಾತನ್ನು ಹೇಳಿದ್ದೇನೆ. ನ್ಯೂನ್ಯತೆಗಳು ಇವೆಯೆಂದು ಹೇಳಿದ್ದೇನೆ. ಅದಕ್ಕೆ ಉತ್ತರವಿಲ್ಲದೆ ಬೇಡಿಕೆಗಳನ್ನು ಮತಕ್ಕೆ ಹಾಕುವುದಾದರೆ ಹೇಗೆ, ತಾವು ದಯವಿಟ್ಟು ಗಮನಿಸಬೇಕು. ಅವರು ಬೇಡಿಕೆಗಳಿಗೆ ಉತ್ತರ ಕೊಡಬೇಕು. ನಾವು ಕೇಳಿದ ಪ್ರಸ್ತಾಪ ಮಾಡಿದ ವಿಷಯಗಳಿಗೆ ಉತ್ತರ ಕೊಟ್ಟಿಲ್ಲ. ಉತ್ತರವನ್ನು ಕೊಡಬೇಕು ಹಾಗಾದರೆ ನಾವು ಮಾತನಾಡುವುದರಿಂದ ಏನು ಪ್ರಯೋಜನ? ನಾನು ಪ್ರಸ್ತಾಪ ಮಾಡಿದ್ದಕ್ಕೆ ಏನು ಉತ್ತರ? ವಿಷಯ ಸಮಿತಿಯ ಮುಖ್ಯವಾದ ಶಿಫಾರಸ್ಸುಗಳು ಏನಾಯಿತು?

ಅಧ್ಯಕ್ಷರು : ಶಿಫಾರಸ್ಸುಗಳ ಬಗ್ಗೆ ಹೇಳಿದ್ದಾರೆ.

ಶ್ರೀ ಸಿ. ಭೈರೇಗೌಡ : ಕೆಲವು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಎಕ್ಸೈಜ್ ಬಾಬಿನಲ್ಲಿ 100 ಕೋಟಿ ರೂಪಾಯಿ ಕಡಿಮೆಯಾಗುತ್ತದೆಂದು ಹೇಳಿದ್ದೇನೆ. ನ್ಯೂನ್ಯತೆಗಳ ಬಗ್ಗೆ ಹೇಳಿದ್ದೇನೆ ದಯವಿಟ್ಟು ಅದಕ್ಕೆ ಉತ್ತರ ಕೊಡಬೇಕು. ಮೂಕ ಪ್ರೇಕ್ಷಕರಾಗಿದ್ದರೆ ನಮ್ಮ ಕರ್ತವ್ಯವನ್ನು ನಾವು ಮಾಡಿದ ಹಾಗೆ ಆಗುವುದಿಲ್ಲವೆಂದು ತಮ್ಮಲ್ಲಿ ಅತ್ಯಂತ ವಿನಯಪೂರ್ವಕವಾಗಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಅದರ ಬಗ್ಗೆ ಮುಖ್ಯಮಂತ್ರಿಗಳು ಹೇಳುತ್ತಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ವಿಷಯ ಸಮಿತಿಯ ವರದಿಗಳನ್ನು ಜಾರಿಗೆ ತರುವುದಕ್ಕೆ 3 ತಿಂಗಳು ಕಾಲಾವಕಾಶವಿದೆ. ಈಗಲೇ ಹೇಳಬೇಕಾದ ಅವಶ್ಯಕತೆಯಿಲ್ಲ. ಸರ್ಕಾರ ಪರಿಶೀಲನೆ ಮಾಡಿ, ಸದಸ್ಯರು ಭಾಷಣ ಮಾಡುವಾಗ ತಿಳಿಸಿದ್ದಾರೆ ಅದನ್ನು ಇಲಾಖೆಯವರು ಗಮನದಲ್ಲಿಟ್ಟುಕೊಳ್ಳುತ್ತಾರೆ.

ಶ್ರೀ ಸಿ. ಭೈರೇಗೌಡ : ಇಲಾಖೆಯವರು ಗಮನದಲ್ಲಿಟ್ಟುಕೊಳ್ಳುವುದಾದರೆ ನಾವು ಏಕೆ ಮಾತನಾಡಬೇಕು? ನನಗೆ ಮಂತ್ರಿಗಳಿಂದ ಉತ್ತರ ಬೇಕು. ಕೊನೆಯ ಪಕ್ಷ ನಾನು ಇಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಗಳಿಗಾದರೂ ಉತ್ತರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ಬೇಡಿಕೆಯ ಮೇಲೆ ಮೂರ್‍ನಾಲ್ಕು ದಿವಸ ಚರ್ಚೆ ನಡೆದಿದೆ. ಇಲ್ಲಿ ಮಂತ್ರಿಗಳು ಅದಕ್ಕೆ ಉತ್ತರ ಹೇಳುವುದಕ್ಕೆ ಅವಕಾಶವಿರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಮ್ಮ ಡಿಮಾಂಡ್ಸ್ ಬರುತ್ತವೆ. ಮುಖ್ಯವಾದ ಇಲಾಖೆಗಳಾದ ಎಕ್ಸೈಜ್ ಇಲಾಖೆಯಿರಬಹುದು ಕಮರ್ಷಿಯಲ್‌ಟ್ಯಾಕ್ಸ್ ಇಲಾಖೆಯಿರಬಹುದು ಹಣಕಾಸು ಇಲಾಖೆಯ ಬಗ್ಗೆ ಚರ್ಚೆ ನಡೆಯುವಾಗ ನಿಮ್ಮ ಪ್ರಶ್ನೆಗಳಿಗೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಆರ್.ಎನ್.ನಾಯಕ್‌ರವರು ತಮಗೆ ಸಂಬಂಧಪಟ್ಟ ಇಲಾಖೆಗಳ ಬೇಡಿಕೆಯನ್ನು ಮಂಡಿಸಿ.

ಶ್ರೀ ಸಿ. ಭೈರೇಗೌಡ : ಬೇಡಿಕೆಗಳನ್ನು ಮಂಡಿಸಿ ಒಪ್ಪಿಗೆ ಪಡೆಯತಕ್ಕ ಸಂದರ್ಭದಲ್ಲಿ ಮಂತ್ರಿಗಳು ಗೈರುಹಾಜರಿಯಾದರೆ ಏನಾಗುತ್ತದೆ? ಮಾನ್ಯ ಅಧ್ಯಕ್ಷರು ಕರೆದಾಗ ಇಲ್ಲಿ ಬರಬೇಕಾಗಿಲ್ಲ. ಇಲ್ಲಿ ಕಾಯ್ದು ಕೂರಬೇಕು. ಇದು ಅಧ್ಯಕ್ಷರಿಗೆ ಅಗೌರವ ತರುತ್ತದೆ.

ಶ್ರೀ ಆರ್.ಎನ್. ನಾಯಕ್ (ವಾರ್ತಾ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅಭಿಯಾಚನೆ ಕ್ರಮಾಂಕ : 15 : ಕಲೆ,ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ'ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 14.94,47,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 29 : ವಾರ್ತಾ ಮತ್ತು ಪ್ರಚಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವಾರ್ತಾ ಮತ್ತು ಪ್ರಚಾರಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 9,88,71,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 20,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಸಹಕಾರ ಸಚಿವರು) :

ಅಭಿಯಾಚನೆ ಕ್ರಮಾಂಕ : 55 : ಸಹಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಹಕಾರ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 43,64,35,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,69,72,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅಭಿಯಾಚನೆ ಕ್ರಮಾಂಕ : 56 : ಕ್ರಮಪಡಿಸಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕ್ರಮಪಡಿಸಿದ ಮಾರುಕಟ್ಟೆಗಳಿಗಾಗಿ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,43,70,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅಭಿಯಾಚನೆ ಕ್ರಮಾಂಕ : 26 : ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಾರಿಗೆ ಸೇವೆ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 38,70,71,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,38,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅಭಿಯಾಚನೆ ಕ್ರಮಾಂಕ : 46 : ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ1 73,82,98,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 47 : ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕಟ್ಟಡಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 12,50,55,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 111,13,60,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 48 : ರಸ್ತೆಗಳು ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ರಸ್ತೆಗಳು ಮತ್ತು ಸೇತುವೆಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 155,05,63,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 91,63,50,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ, ರಾಜ್ಯ ಸಚಿವರು)

ಅಭಿಯಾಚನೆ ಕ್ರಮಾಂಕ : 9 : ಜವಳಿ ಉದ್ಯಮಗಳು ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಜವಳಿ ಉದ್ಯಮಗಳು ಇತ್ಯಾದಿ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು

ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 49,80,46,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,39,07,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ಚೌಡರೆಡ್ಡಿ : (ಗೃಹ ಸಚಿವರು)

ಅಭಿಯಾಚನೆ ಕ್ರಮಾಂಕ : 27. : ಆರಕ್ಷಕ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಆರಕ್ಷಕ ಸೇವೆ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 340,47,84,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಡಾ : ಆರ್. ಬಿ. ಚೌಧುರಿ (ಬಂದೀಖಾನೆ ರಾಜ್ಯ ಸಚಿವರು) :

ಅಭಿಯಾಚನೆ ಕ್ರಮಾಂಕ : 28 : ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಬಂದೀಖಾನೆಗಳು , ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 31,27,49,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಡಾ : ಜಿ. ಪರಮೇಶ್ವರ್ (ರೇಷ್ಮೆ ರಾಜ್ಯ ಸಚಿವರು) :

ಅಭಿಯಾಚನೆ ಕ್ರಮಾಂಕ : 8 : ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ರೇಷ್ಮೆ ವ್ಯವಸಾಯ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 116,57,37,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,12,50,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-6-ಗಣಿ ಮತ್ತು ಭೂವಿಜ್ಞಾನ

ಶ್ರೀಡಿ.ವಿ. ಚಿನ್ನಪ್ಪ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ , 31-3-1995ರಂದು ಕೊನೆಗೊಳ್ಳುವ

ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 6ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು, ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರ್ಮಾಡಿದ ಮೊಬಲಗು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನುದಾನದಲ್ಲಿ ಮಂಜೂರ್ಮಾಡಿದ ಮೊತ್ತವೂ ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ-1-1 ಕೃಷಿ :

ಶ್ರೀ ಹೆಚ್ಎಂ. ರೇವಣ್ಣ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ,ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ, 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 1ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು, ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರ್ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರ್ಮಾಡಿದ ಮೊತ್ತವೂ ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ .

ಅಧ್ಯಕ್ಷರು : ಎಲ್ಲಾ ಬೇಡಿಕೆಗಳನ್ನು ಮಂಡಿಸಲಾಯಿತು.

